ಬಂದ ಮನುಷ್ಯ, ಬಲವಂತವಾಗಿ ಎರಡು ಜಿಲೇಬಿಗಳನ್ನು ಬಾಳೆಎಲೆಗೆ ಹಾಕಿದ್ದ. ವಯಸ್ಸು ಮೂವತ್ತೈದು ದಾಟಿರಬಹುದು. ಇಷ್ಟು ವಯಸ್ಸಿನ ವ್ಯಕ್ತಿಗೆ ಇಲ್ಲಿಯ ಭಾಷೆಯಲ್ಲಿ ಏನೆಂದು ಕರೆಯುವುದೆಂದು ತಿಳಿಯದೆ, “ಮಾವಾರ, ಬ್ಯಾಡ ಸೇರಂಗಿಲ್ಲ” ಎಂದು ಹೇಳಿದೆ. ಅಕ್ಕಪಕ್ಕದಲ್ಲಿದ್ದವರೆಲ್ಲ ಒಮ್ಮೆಲೇ ನನ್ನ ಮಾತನ್ನು ಕೇಳಿ ಗಾಬರಿಯಾದವರಂತೆ ಕಂಡರು. ಮುಜುಗರದಿಂದಲೋ, ಅವಮಾನದಿಂದಲೋ ಎಂಬಂತೆ ಆ ವ್ಯಕ್ತಿ ಅಲ್ಲಿಂದ ಹೊರಟು ಹೋಗಿದ್ದ. ಪಕ್ಕದಲ್ಲಿದ್ದ ದೊಡ್ಡವ್ವ ನನ್ನನ್ನು ಚಿವುಟಿ, “ಯಾಕ್ ಹಾಗ್ ಕರ್ದಿ? ಅವನ್ನ ಯಾರ್ ಅಂತಾ ತಿಳಕಂಡಿಯ? ಅವನ ನಿನ್ನ ಮದ್ವಿ ಆಗ ಹುಡ್ಗ” ಎಂದಳು. “ಮದಿ ಆಗ ಹುಡ್ಗ? ಅವ ಎಲ್ಲಿ ಹುಡ್ಗ ಅದಾನ? ನಡು ವಯಸ್ ಧಾಟೈತಿ ಅವನಿಗ” ಎಂದೆ. “ಸುಮ್ನಿರಮ್ಮಿ, ಬಾ ಹೋಗೋಣು” ಎಂದು ತಳ್ಳಿಕೊಂಡು ಬಂದಳು. ದೊಡ್ಡವ್ವನ ಈ ಸತ್ಯ ನನ್ನಲ್ಲಿ ಯಾವುದೇ ಆತಂಕವನ್ನು, ಭಯವನ್ನು ಸೃಷ್ಟಿಸಲಿಲ್ಲ. ಭಯಾನಕ ಬದಲಾವಣೆಗಳನ್ನು ಸ್ವೀಕರಿಸಲು ಮನಸ್ಸನ್ನು ಸಿದ್ಧವಾಗಿತ್ತು.




ನಮಗಾಗಿಯೇ ಕೊಟ್ಟ ಕೋಣೆ. ನಾವು ಎಂಟುಜನರನ್ನು ಹೊರತುಪಡಿಸಿ ಬೇರೆ ಯಾರೂ ಅಲ್ಲಿ ಬರುವಂತೆ ಕಾಣಿಸಲಿಲ್ಲ. ದೊಡ್ಡವ್ವ ಹೊರಗೋಗಿದ್ದಳು. ಒಂದು ಮೂಲೆಯಲ್ಲಿ ನಾನು, ನನ್ನ ವಿರುದ್ಧ ಮೂಲೆಯಲ್ಲಿ ನಮ್ಮವರದೇ ಆರು ಜನರ ಗುಂಪು. ಅವರ ಮಾತು ನನ್ನನ್ನು ತಲುಪುತ್ತಿರಲಿಲ್ಲ. ತಲುಪಬಾರದೆಂಬುದೇ ಅವರ ಉದ್ದೇಶವಿದ್ದಲ್ಲಿ ತಲುಪುವುದಾದರೂ ಹೇಗೆ? ಕುಳಿತಲ್ಲೇ ಕಣ್ಣುಮುಚ್ಚಿ ನಿದ್ದೆಗೆ ಜಾರಿದೆ. ಅದೇ ಸ್ಥಿತಿಯಲ್ಲಿ ಎಷ್ಟು ಹೊತ್ತು ಕುಳಿತಿದ್ದೇನೋ... ಎಚ್ಚರವಾದಾಗ ಕೋಣೆಯಲ್ಲಿ ಯಾರೂ ಇರಲಿಲ್ಲ. ಮದುವೆಯ ಸಂಭ್ರಮದಲ್ಲಿ ತುಂಬಿದ್ದ ಮನೆ ಸ್ವಲ್ಪ ಮಟ್ಟಿಗೆ ಶಾಂತವಾಗಿದ್ದಂತೆ ಕಂಡಿತು. ಎದ್ದು ಕಿಟಕಿಯಿಂದ ಹೊರನೋಡಿದೆ. ಅಲಂಕಾರವಾಗಿದ್ದ ಮನೆ, ಅಂಗಳವನ್ನು ಹೊರತುಪಡಿಸಿ ಬೇರೆ ಯಾರೂ ಕಾಣದಿದ್ದಾಗ, ಆತಂಕದಿಂದ ಹೊರಗೋಡಿಬಂದೆ. ಪಕ್ಕದ ಕೋಣೆಯಿಂದ ಮೆಲ್ಲನೆ ಧ್ವನಿ ಕೇಳಿದಂತಾಗಿ ನಿಧಾನಕ್ಕೆ ಬಾಗಿ, ದೊಡ್ಡವ್ವನನ್ನು ನೋಡಿ